ನ್ಯೂ ಅಪೊಸ್ಟಾಲಿಕ್ ಚರ್ಚ್
ಇಂಡಿಯಾ

# ಕೃತಜ್ಞತಾರ್ಪಣೆ 2021

ಆತ್ಮೀಯ ಸಹೋದರ ಸಹೋದರಿಯರೇ,

ಹೆಚ್ಚಿನ ದೇಶಗಳಲ್ಲಿ ಕಾಲಗಳುಂಟು. ನಾವು ಬಿಸಿ, ಶೀತ, ಮಳೆ, ಶುಷ್ಕ ಮತ್ತು ಪ್ರತಿಯೊಂದರ ಮಿಶ್ರಣವನ್ನು ಅನುಭವಿಸಬಹುದು. ಪ್ರತಿಯೊಂದು ಕಾಲವೂ ಸೃಷ್ಟಿಗೆ ತನ್ನ ಕೊಡುಗೆಯನ್ನು ನೀಡುತ್ತದೆ ಮತ್ತು ಅದರಿಂದ ನಾವು ಏನು ಇಳುವರಿ ಮಾಡಬಹುದೋ ಅಥವಾ ಕೊಯ್ಲು ಮಾಡಬಹುದೋ ಅದಕ್ಕೂ ತನ್ನ ಕೊಡುಗೆಯನ್ನು ನೀಡುತ್ತದೆ. ಅದರಿಂದ ನಾವು ಪೂರೈಸಲ್ಪಡುತ್ತೇವೆ, ಪೋಷಿಸಲ್ಪಡುತ್ತೇವೆ ಮತ್ತು ಕಾಪಾಡಲ್ಪಡುತ್ತೇವೆ. ನಮ್ಮ ಸೃಷ್ಟಿಕರ್ತನಾದ ದೇವರು ಎಂಥಾ ಅದ್ಭುತವನ್ನು ಮಾಡಿದ್ದಾನೆ *(ಆದಿಕಾಂಡ 2: 3 – ಕೃತಜ್ಞತಾರ್ಪಣೆಯ ದಿನದ ಡಿವೈನ್ ಸರ್ವಿಸಿನ ಬೈಬಲ್ ಮೂಲವಾಕ್ಯ).*

ನಮ್ಮ ಜೀವಿತಗಳಲ್ಲೂ, ನಾವು ಸಹ ಬೇರೆ ಬೇರೆ ಕಾಲಗಳನ್ನು (ಸಮಯವನ್ನು) ಅನುಭವಿಸುತ್ತೇವೆ; ಒಳ್ಳೆಯ ಸಮಯ ಮತ್ತು ನಾವು ಆಪತ್ತನ್ನು ಎದುರಿಸುವಂಥ ಕಷ್ಟದ ಸಮಯ. ಈ ಕೋವಿಡ್ ಸಮಯವೂ ಇಂಥಾ ಸಮಯವೇ ಆಗಿರುವುದು. ಹೇಗೂ, ಇದು ನಮ್ಮನ್ನು, "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ..." *(ರೋಮಾ 8: 28)* ಎಂಬ ದೇವರ ಆಶೀರ್ವಾದವನ್ನು ಮರೆಯದಂತೆ ನಾವು ಎಚ್ಚರವಾಗಿರಬೇಕು. ದೇವರು ನಮ್ಮೊಂದಿರುತ್ತಾನೆ! ನಾವು,

- ತನ್ನ ಸೃಷ್ಟಿಯನ್ನು ನಂಬಿಗಸ್ತಿಕೆಯಿಂದ ನೋಡಿಕೊಳ್ಳುವ, ತಂದೆಯಾದ ದೇವರನ್ನು ಸ್ತುತಿಸಿ ಕೃತಜ್ಞತೆ ಸಲ್ಲಿಸುತ್ತೇವೆ.
- ತನ್ನ ಬಲಿದಾನ ಹಾಗು ಪುನರುತ್ಥಾನದ ಮೂಲಕ ನಮಗೆ ತನ್ನ ರಾಜ್ಯಕ್ಕೆ ಪ್ರವೇಶಾಧಿಕಾರ ನೀಡಿರುವ ಮಗನಾದ ದೇವರನ್ನು ಸ್ತುತಿಸಿ ಕೃತಜ್ಞತೆ ಸಲ್ಲಿಸುತ್ತೇವೆ.
- ನಮ್ಮನ್ನು ಕ್ರಿಸ್ತನಲ್ಲಿ ನೂತನ ಸೃಷ್ಟಿಯನ್ನಾಗಿ ಮಾಡಿ ದೇವರೊಂದಿಗಿರುವ ನಿತ್ಯಾನ್ಯೋನ್ಯತೆಗಾಗಿ ಶುದ್ಧೀಕರಿಸುವ ಪವಿತ್ರಾತ್ಮನಾದ ದೇವರನ್ನು ಸ್ತುತಿಸಿ ಕೃತಜ್ಞತೆ ಸಲ್ಲಿಸುತ್ತೇವೆ.

ದೇವರು ನಮ್ಮ ವಿಷಯದಲ್ಲಿ ಮಾಡಿರುವ ಮಹತ್ಕಾರ್ಯಗಳ ಕುರಿತು ನಾವು ಸಮಯ ತೆಗೆದುಕೊಂಡು ಚಿಂತನೆ ಮಾಡುವುದು ಹಿತಕರವಾಗಿರುವುದು.

ನಮ್ಮ ಕೃತಜ್ಞತೆಯನ್ನು ಸಲ್ಲಿಸಲು ನಮ್ಮಲ್ಲಿ ಬಹಳಷ್ಟು ಮಾರ್ಗಗಳಿರುವವು. ನಾವದನ್ನು ಬರೀ ಮಾತಿನಲ್ಲಲ್ಲಾ ಆದರೆ ನಮ್ಮ ನಡತೆಯಲ್ಲೂ ವ್ಯಕ್ತಪಡಿಸುತ್ತೇವೆ.

### A. ಭಾನುವಾರವನ್ನು ಶುದ್ಧೀಕರಿಸಿರಿ

ಈ ಸೋಂಕಿನ ವೇಳೆ, ಹಲವರಿಗೆ ಸ್ವಲ್ಪ ಹಚ್ಚಿನ ಸಮಯವಿರುವುದು, ಅದೇ ಸಮಯದಲ್ಲಿ ಇನ್ನೂ ಕೆಲವರು ತಮ್ಮ ಜೀವಿತಗಳಲ್ಲಿರುವ ಅಸ್ತವ್ಯಸ್ತತೆಯನ್ನು ಸರಿಪಡಿಸಲು ಪ್ರಯತ್ನಿಸುವುದರಲ್ಲಿ ಸಹಿಸಲಾರದಂಥ ಪರಿಸ್ಥಿತಿಯಲ್ಲಿರುವರು. ನಾವು ಚಿಂತನೆಗಾಗಿ, ಪ್ರಾರ್ಥನೆಗಾಗಿ, ಮತ್ತು ಡಿವೈನ್ ಸರ್ವಿಸಿಗಾಗಿ ಸಮಯ ತೆಗೆದುಕೊಳ್ಳುವುದು ಪ್ರಾಮುಖ್ಯವಾಗಿದೆ. ನಮ್ಮ ಕೆಲಸ, ಕಟ್ಟುಪಾಡುಗಳ ಮತ್ತು ಮನರಂಜನೆಯ ಮೇಲೂ ಮಿತಿಗಳನ್ನು ನಿಗಧಿಪಡಿಸಬೇಕೆಂದು ನಮಗೆ ಆದೇಶಿಸಲಾಗಿದೆ. ನಾವು "ಉತ್ತಮ ಭಾಗವನ್ನು ಆರಿಸಿಕೊಳ್ಳಬೇಕು" ಎಂಬ ದಿಶೆಯನ್ನೇ ಅನುಸರಿಸಬೇಕೆಂದು ಮಾರ್ಥ ಮರಿಯಳರ ಕಥೆಯು ನಮಗೆ ತೋರಿಸುತ್ತದೆ *(ಲೂಕ 10: 38–42).* ಇದರ ಅರ್ಥವೇನೆಂದರೆ, ತ್ರಯೈಕ ದೇವರೊಂದಿಗಿರುವ ನಮ್ಮ ಸಂಬಂಧ ಯಾಚಿಸುವುದು, ನಮ್ಮ ವೈಯಕ್ತಿಕ ಶುದ್ಧೀಕರಣವನ್ನು ಬೆನ್ನಟ್ಟುವುದು, ಮತ್ತು ಡಿವೈನ್ ಸರ್ವಿಸ್‌ಗಳಲ್ಲಿ ವಾಕ್ಯ ಹಾಗು ಪವಿತ್ರಭೋಜದಲ್ಲಿ ಪಾಲುಗಾರರಾಗಬೇಕೆಂಬುದಾಗಿದೆ. ಈ ರೀತಿಯಲ್ಲಿ ನಾವು ನಮ್ಮ ಸ್ತೋತ್ರವನ್ನು ವ್ಯಕ್ತಪಡಿಸುತ್ತೇವೆ ಮತ್ತು ಭಾನುವಾರವನ್ನು ಪರಿಶುದ್ಧವಾಗಿ ಕಾಪಾಡುತ್ತೇವೆ.

### B. ಸೃಷ್ಟಿಯನ್ನು ಗೌರವಿಸಿರಿ

ನಾವು ಸೃಷ್ಟಿಯನ್ನು ಪ್ರೀತಿಯಿಂದಲೂ ಬುದ್ಧಿವಂತಿಕೆಯಿಂದಲೂ ನೋಡಿಕೊಳ್ಳಬೇಕು. ಇಂದಿನ ದಿನಗಳಲ್ಲಿ, ಪ್ರಪಂಚದಾದ್ಯಂತ ಪರಿಸರ, ಹವಾಮಾನ ಬದಲಾವಣೆ ಮತ್ತು ನಮ್ಮ ನೈಸರ್ಗಿಕ ಸಂಪನ್ಮೂಲಗಳ ಶೋಷಣೆಯ ಬಗ್ಗೆ ದೊಡ್ಡ ಚರ್ಚೆ ನಡೆಯುತ್ತಿರುವುದು. ಸೃಷ್ಟಿಯನ್ನು ರಕ್ಷಿಸಲು ಕಾನೂನುಗಳು ಹಾಗು ತಂತ್ರಗಳು ಅಳವಡಿಸಲಾಗಿವೆ. ನಮ್ಮ ಮಕ್ಕಳ ಹಾಗು ಮುಂದಿನ ಪೀಳಿಗೆಗಳ ಭವಿಷ್ಯವು ಸುರಕ್ಷಿತವಾಗಿರುವುದಕ್ಕೆ ಸಹಾಯಮಾಡಲು ನಾವು ನಮ್ಮ ಪಾತ್ರವಹಿಸುವುದು ಮುಖ್ಯವಾಗಿದೆ. ಅದೇ ಪ್ರಕಾರವಾಗಿ, ನಮ್ಮ ನೆರೆಯವನಂತೆ ನಾವು ಸಹ ದೇವರ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟಿರುತ್ತೇವೆ. ಜನರ ಮೂಲ, ಸಂಪ್ರದಾಯ ಅಥವಾ ಸಾಮಾಜಿಕ ಸ್ಥಾನಮಾನದ ಹೊರತಾಗಿಯೂ ನಾವು ಎಲ್ಲಾ ಜನರನ್ನು ಒಂದೇ ರೀತಿಯಿಂದ ಗೌರವಿಸಲು ಬದ್ಧರಾಗಿದ್ದೇವೆ. ಯೇಸುವು ಕಲಿಸಿಕೊಟ್ಟಂತೆ: ನಮ್ಮೊಂದಿಗೆ ಜನರು ಹೇಗೆ ವರ್ತಿಸಬೇಕೆಂದು ನಾವು ಅಪೇಕ್ಷಿಸುತ್ತೇವೋ, ಹಾಗೆಯೇ ನಾವು ಸಹ ಎಲ್ಲರೊಂದಿಗೆ ವರ್ತಿಸುವ ಹಂಗಿನಲ್ಲಿದ್ದೇವೆ *(ಮತ್ತಾಯ 7: 12, ಲೂಕ 6: 37).* ಸುವಾರ್ತೆಯ ಮೌಲ್ಯಗಳಾಗಿರುವ ಪ್ರೀತಿ, ಸಹಾನುಭೂತಿ, ಕ್ಷಮಾಪಣೆ ಹಾಗು ಹಿಂಸೆ ಮತ್ತು ಅನ್ಯಾಯದ ತಿರಸ್ಕಾರ, ಇವುಗಳಿಗೆ ನಾವು ಬದ್ಧರಾಗಿರಬೇಕು.

### C. ಕೆಲಸ, ಕಾಣಿಕೆ ಮತ್ತು ತ್ಯಾಗ

ನ್ಯೂ ಅಪೊಸ್ಟಾಲಿಕ್ ಕ್ರೈಸ್ತರಾದ ನಮಗೆ ಈ ಪರಿಕಲ್ಪನೆಯು ಹೊಸದೇನಲ್ಲ. ಪ್ರಾರಂಭದಿಂದಲೂ ಮತ್ತು ಬೈಬಲಿನ ಇಡೀ ಚರಿತ್ರೆಯಲ್ಲಿ, ಕೆಲಸ ಮಾಡುವುದರ ಕುರಿತು ಹೇಳಲಾಗಿದೆ. ಸೇವಕತನವು, ಬಾಧ್ಯತೆಯಿಂದಲ್ಲ ಆದರೆ ನಮ್ಮ ಕೃತಜ್ಞತೆಯುಳ್ಳ ಹೃದಯದ ಪ್ರವೃತ್ತಿಯ ಪರಿಣಾಮವಾಗಿರುತ್ತದೆ. ನಾವು ಯೋಗದಾನ ನೀಡಲು, ಸೇವೆ ಮಾಡಲು, ಕೆಲಸ ಮಾಡಲು, ಕಾಣಿಕೆ ನೀಡಲು ಮತ್ತು ನಮ್ಮ ತ್ಯಾಗವನ್ನು ತರಲು ಇಚ್ಛಿಸುತ್ತೇವೆ. ಇದು, ದೇವರ ಕೃಪೆಯ, ನಮ್ಮ ಜೀವಿತಗಳಲ್ಲಿರುವ ಆತನ ಆಶೀರ್ವಾದಗಳ ಮತ್ತು ನಮ್ಮ ತ್ರಯೈಕ ದೇವರಿಗಾಗಿರುವ ನಮ್ಮ ಪ್ರೀತಿಯ ನೇರವಾದ ಪರಿಣಾಮವಾಗಿದೆ.

ಅಂತ್ಯದಲ್ಲಿ, ಕೆನಾಡಾ ಜಿಲ್ಲೆಯ ಅಪೊಸ್ತಲರೊಂದಿಗೂ ಬಿಷಪರೊಂದಿಗೂ ಸೇರಿ, ನಾನು ನಿಮ್ಮೆಲ್ಲರಿಗೂ ನಿಮ್ಮ ಕುಟುಂಬಗಳಿಗೂ ಆಶೀರ್ವಾದಮಯವಾದ ಕೃತಜ್ಞತಾರ್ಪಣೆಯ ದಿನವನ್ನೂ ದೇವರ ಶ್ರೇಷ್ಠವಾದ ಆಶೀರ್ದವನ್ನೂ ಆಶಿಸುತ್ತೇನೆ.

ಹೃತ್ಪೂರ್ವಕವಾಗಿ

ಮಾರ್ಕ್ ವೊಲ್

**Thanksgiving**
3 October 2021
Kannada